# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 980
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 13-03-2020

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿ ಬಿ.ಎಂ.ಟಿ.ಸಿ ಬಸ್ಸುಗಳ ಹೊಗೆಯಿಂದ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಂಮಸಾಸಂಸ್ಥೆಯಲ್ಲಿ ಒಟ್ಟು 6617 ಬಸ್ಸುಗಳು ಕಾರ್ಯಾಚರಣೆಯಲ್ಲಿದ್ದು, ಎಲ್ಲಾ ಬಸ್ಸುಗಳಲ್ಲಿ ಹೊಗೆ ಸೂಸುವಿಕೆಯ ಸಾಂದ್ರತೆಯು ನಿಗದಿತ ಮಟ್ಟಕ್ಕಿಂತಲೂ ಕಡಿಮೆ ಇರುವಂತೆ ಉತ್ತಮವಾಗಿ ತಾಂತ್ರಿಕ ನಿರ್ವಹಣೆ ಮಾಡಲಾಗುತ್ತಿದೆ.<br><br>ಆದಾಗ್ಯೂ, ಸಂಸ್ಥೆಯ ಬಸ್ಸುಗಳಿಂದ ವಾಯು ಮಾಲಿನ್ಯ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಪ್ರತಿ ತಿಂಗಳು ಘಟಕದಲ್ಲಿ ಎಲ್ಲಾ ವಾಹನಗಳನ್ನು ಹೊಗೆ ತಪಾಸಣೆಗೆ ಒಳಪಡಿಸಲಾಗುತ್ತಿದ್ದು, ದೋಷಕಂಡು ಬರುವ ವಾಹನಗಳನ್ನು ದುರಸ್ಥಿ ಪಡಿಸಿದ ನಂತರವಷ್ಟೆ ಕಾರ್ಯಾಚರಣೆ ಮಾಡಲಾಗುತ್ತದೆ.<br>2. ವಾಯು ಮಾಲಿನ್ಯ ನಿಯಂತ್ರಿಸಲು ಕೇಂದ್ರ ಮೋಟಾರ್ ವಾಹನ ನಿಯಮ 115 (2) 1989 ಪ್ರಕಾರ ಬಿ.ಎಸ್-2/3 ಬಸ್ಸುಗಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಹಾಗೂ ಬಿ.ಎಸ್.-4 ಬಸ್ಸುಗಳಿಗೆ ಪ್ರತಿ ಒಂದು ವರ್ಷಕ್ಕೆ ಆನ್‌ಲೈನ್ ಮುಖೇನ ಹೊಗೆ ತಪಾಸಣೆಯನ್ನು ಮಾಡಲಾಗುತ್ತಿದೆ.<br>3. ಬೆಂ.ಮ.ಸಾ.ಸಂಸ್ಥೆಯ ಆಯ್ದ ಟಿ.ಟಿ.ಎಂ.ಸಿ. ಮತ್ತು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಅನಿರೀಕ್ಷಿತ ಹೊಗೆ ತಪಾಸಣೆ ನಡೆಸಿ ಹೆಚ್ಚು ಹೊಗೆ ಹೊರ ಸೂಸುವ ವಾಹನಗಳು ಕಂಡುಬಂದಲ್ಲಿ ದುರಸ್ಥಿಗೆ ಒಳಪಡಿಸಲು ಕೂಡಲೇ ಘಟಕಕ್ಕೆ ಕಳುಹಿಸಿ, ದುರಸ್ಥಿಯ ನಂತರವಷ್ಟೆ ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ. |
| ಆ | ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ತಡೆಯಲು ವಿದ್ಯುತ್‌ಚಾಲಿತ ಬಸ್ಸುಗಳ ಸೇವೆಯನ್ನು ನಾಗರೀಕರಿಗೆ ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು; | ಬೆಂ.ಮ.ಸಾ.ಸಂಸ್ಥೆಯು ಪ್ರಸ್ತುತ 300 ಹವಾನಿಯಂತ್ರಿತ 12 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿಯಲ್ಲಿ ಹಾಗೂ 90 ಹವಾನಿಯಂತ್ರಣ ರಹಿತ 9 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಆಚರಣೆ ಮಾಡಲು ಟೆಂಡರ್ ಅನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.<br><br>ಇದಲ್ಲದೆ, ಬೆಂ.ಮ.ಸಾ.ಸಂಸ್ಥೆಯು 2020-21ರಲ್ಲಿ 500 ಎಲೆಕ್ಟ್ರಿಕ್ ವಾಹನಗಳನ್ನು ಆಚರಣೆ ಮಾಡಲು ಯೋಜಿಸಿರುತ್ತದೆ. |
| ಇ | ಇದುವರೆಗೆ ಬಿ.ಎಂ.ಟಿ.ಸಿ ಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳನ್ನು ಬಳಸಲಾಗುತ್ತಿದೆ? | ಪ್ರಸ್ತುತ ಬೆಂ.ಮ.ಸಾ.ಸಂಸ್ಥೆಯಲ್ಲಿ ಯಾವುದೇ ವಿದ್ಯುತ್ ಚಾಲಿತ ಬಸ್ಸುಗಳನ್ನು ಆಚರಣೆ ಮಾಡುತ್ತಿಲ್ಲ. |

ಸಂಖ್ಯೆ: ಟಿಡಿ 81 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು